# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 309 |
| ಉತ್ತರಿಸಬೇಕಾದ ದಿನಾಂಕ | : | 21.12.2022 |
| ಸದಸ್ಯರ ಹೆಸರು | : | ಶ್ರೀ. ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಂದಾಯ ಇಲಾಖೆ ವ್ಯಾಪ್ತಿಗೆ ಬರುವ ಪೌತಿ ಖಾತೆ ಮಾಡಲು ಭೂಮಿ ತಂತ್ರಾಂಶದಲ್ಲಿ ಇಲ್ಲಿಯ ತನಕ ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಕಂದಾಯ ಇಲಾಖೆ ವ್ಯಾಪ್ತಿಗೆ ಬರುವ ಪೌತಿ ಖಾತೆ ಮಾಡಲು ಭೂಮಿ ತಂತ್ರಾಂಶದಲ್ಲಿ ಇಲ್ಲಿಯ ತನಕ ಸಲ್ಲಿಕೆಯಾಗಿರುವ ಅರ್ಜಿಗಳ ವಿವರಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಆ | ಭೂಮಿ ತಂತ್ರಾಂಶದಲ್ಲಿ ಸಲ್ಲಿಕೆಯಾಗಿರುವ ಅರ್ಜಿಗಳಲ್ಲಿ ಇಲ್ಲಿಯ ತನಕ ಪೌತಿ ಖಾತೆ ಮಾಡಿಕೊಟ್ಟಿರುವ ಸಂಖ್ಯೆ ಎಷ್ಟು; ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಸಂಪೂರ್ಣ ಮಾಹಿತಿಯನ್ನು ನೀಡುವುದು) | |
| ಇ | ರೈತರಲ್ಲಿ ಜಾಗೃತಿ ಕೊರತೆ ಹಾಗೂ ಅಧಿಕಾರಿಗಳ ನಿರ್ಲಕ್ಷದಿಂದ ಸರ್ಕಾರದ ಮಹತ್ವಾಕಾಂಕ್ಷಿ ಪೌತಿ ಖಾತೆ ಆಂದೋಲನಕ್ಕೆ ಹಿನ್ನಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಕಂಇ 33 ಟಿ ಆರ್‌ಎಂ 2019(ಇ) ದಿನಾಂಕ:17.10.2022 ರನ್ವಯ ಪೌತಿ/ವಾರಸಾ ಮ್ಯುಟೇಷನ್ ಪ್ರಕ್ರಿಯೆಯನ್ನು ಸರಳೀಕೃತಗೊಳಿಸಿ, ಪೌತಿಖಾತಾ ಆಂದೋಲನ ಜಾರಿಗೆ ತಂದಿದ್ದು, ಸದರಿ ಆಂದೋಲನದ ಬಗ್ಗೆ ಹೋಬಳಿ/ಗ್ರಾಮ ಮಟ್ಟದಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳಲಾಗಿರುತ್ತದೆ. ಪೌತಿಖಾತಾ ಆಂದೋಲನವು ನಿರಂತರ ಯೋಜನೆಯಾಗಿದ್ದು ಇದುವರೆಗೂ ರಾಜ್ಯಾದ್ಯಂತ 1,55,512 ಅರ್ಜಿಗಳು ಸ್ವೀಕೃತಗೊಂಡಿದ್ದು ಈ ಪೈಕಿ 1,40,521 ಅರ್ಜಿಗಳನ್ನು ವಿಲೆಗೊಳಿಸಲಾಗಿದೆ. |
| ಈ | ಕಂದಾಯ ಇಲಾಖೆಯ ಅಧಿಕಾರಿಗಳು ಪರಿಣಾಮಕಾರಿಯಾಗಿ ರೈತರು ಬಂದು ಭೂಮಿ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿದರೂ ಸಕಾಲದಲ್ಲಿ ಕೆಲಸ ಮಾಡದಿರುವುದುನ್ನು ಸರ್ಕಾರ ಗಮನಿ ನಿದೆಯೇ ರಾಜ್ಯದಲ್ಲಿ ಲಕ್ಷಾಂತರ ಪೌತಿ ಖಾತೆ ಅರ್ಜಿಗಳ ವಿಲೇವಾರಿಗೆ ಅಧಿಕಾರಿಗಳ/ನೌಕರರ ನಿರ್ಲಕ್ಷತನದಿಂದ ಬಾಕಿ ಇದ್ದು ಸರ್ಕಾರದ ಈ ಯೋಜನೆಗೆ ಹಿನ್ನಡೆಯಾಗಿದ್ದು, ಅಂತಹ ಅಧಿಕಾರಿ/ನೌಕರರ ಮೇಲೆ ಸರ್ಕಾರ ಇದುವರೆವಿಗೂ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಇಂತಹ ಪ್ರಕರಣಗಳು ಸರ್ಕಾರದ ಮಟ್ಟದಲ್ಲಿ ಬಂದಿರುವುದಿಲ್ಲ. |

| | | |
|---|---|---|
| ಉ | ಭೂಮಿ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿದ ಬಳಿಕ ಭೂ ದಾಖಲೆಗಳ ಅಧಿಕಾರಿಗಳ ಗ್ರಾಮ ಲೆಕ್ಕಿಗರಿಗೆ ಕಳುಹಿಸಿ ತಕರಾರು ಬಾರದಿದ್ದರೆ 30 ದಿನದೊಳಗಾಗಿ ಕಂದಾಯ ನಿರೀಕ್ಷಕರು ಖಾತೆ ಬದಲಾವಣೆ ಮಾಡುವ ಬಗ್ಗೆ ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಲು 30 ದಿವಸದ ಬದಲು 10 ದಿವಸಕ್ಕೆ ನಿಗಧಿಪಡಿಸುವ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ (ವಿವರ ನೀಡುವುದು); | ಸರ್ಕಾರದ ಅಧಿಸೂಚನೆ ಸಂಖ್ಯೆ:RD LGP 2022 ದಿನಾಂಕ: 29.09.2022 ರಂತೆ ಕರ್ನಾಟಕ ಭೂಕಂದಾಯ ನಿಯಮಗಳು, 1966ರ ನಿಯಮ 64(3) ಹಾಗೂ ನಿಯಮ 66ಕ್ಕೆ ತಿದ್ದುಪಡಿ ತದ್ದು ಖಾತಾ ಬದಲಾವಣೆ ಮ್ಯುಟೇಷನ್ ಗೆ ಸಂಬಂಧಿಸಿದಂತೆ ನೋಟೀಸ್ ಅವಧಿಯನ್ನು ಈ ಹಿಂದೆ ಇದ್ದ 30ದಿನಗಳಿಂದ 15ದಿನಗಳಿಗೆ ಪರಿಷ್ಕರಿಸಲಾಗಿದ್ದು, ಅದರಂತೆ ಭೂಮಿ ತಂತ್ರಾಂಶದಲ್ಲಿಯೂ ನೋಂದಾಯಿತ ದಸ್ತವೇಜುಗಳ ನೋಟೀಸು ಅವಧಿಯನ್ನು 15 ದಿನಗಳಿಗೆ ಮಾರ್ಪಾಡು ಮಾಡಲಾಗಿರುತ್ತದೆ. |
| ಊ | ಭೂ ಮಾಲೀಕರು ಮರಣ ಹೊಂದಿ ವರ್ಷ ಮೀರಿದ್ದರೂ ಮರಣ ನೋಂದಣಿ ಆಗದಿದ್ದಲ್ಲಿ ಎ.ಸಿ.ಕೋರ್ಟ್‌ನಿಂದ ಆದೇಶ ಪಡೆದು ಅಥವಾ ಜೆ.ಎಂ.ಸಿ.ನ್ಯಾಯಾಲಯದ ಆದೇಶದ ಮೇರೆಗೆ ತಹಶೀಲ್ದಾರ್ ಕಛೇರಿಯಲ್ಲಿ ಮರಣ ಪ್ರಮಾಣ ಪತ್ರ ಪಡೆಯುವ ಅವಕಾಸವಿರುವುದನ್ನು ರದ್ದುಪಡಿಸಿ, ಆಯಾ ನಾಡ ಕಛೇರಿ ಅಥವಾ ಕಂದಾಯ ನಿರೀಕ್ಷಕರು ಅಥವಾ ಗ್ರಾಮ ಪಂಚಾಯಿತಿಯ ಅಧಿಕಾರಿಗಳಿಗೆ ಈ ಅಧಿಕಾರವನ್ನು ಹಸ್ತಾಂತರಿಸಿ ಈ ವಿಳಂಭವನ್ನು ತಪ್ಪಿಸಿ ರೈತರಿಗೆ ಅನುಕೂಲ ಮಾಡಿಕೊಡಲು ಸರ್ಕಾರಕ್ಕಿರುವ ತೊಂದರೆಯೇನು ಈ ಬಗ್ಗೆ ಸರ್ಕಾರ ಸೂಕ್ತ ಆದೇಶ ಹೊರಡಿಸುವುದೇ; | ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 33 ಟಿಆರ್‌ಎಂ 2019(ಇ), ದಿನಾಂಕ 17.10.2020 ರನ್ವಯ ಗ್ರಾಮಲೆಕ್ಕಿಗರು ಮತ್ತು ರಾಜಸ್ವ ನಿರೀಕ್ಷಕರು ಸ್ಥಳ ತನಿಖೆ/ಮಹಜರ್ ಮಾಡಿ ಮೃತ ಖಾತೆದಾರರು ಮರಣ ಹೊಂದಿರುವ ಬಗ್ಗೆ ಸಂಬಂಧಪಟ್ಟ ವಾರಸುದಾರರಿಂದ ಅಫಿಡವಿಟ್ ಅನ್ನು ಪಡೆದು ಪೌತಿ/ವಾರಸಾ ಖಾತೆ ಮಾಡಲು ಅವಕಾಶ ಕಲ್ಪಿಸಲಾಗಿದೆ. |
| ಋ | ಭೂಮಿ ತಂತ್ರಾಂಶದಲ್ಲಿ ಸಲ್ಲಿಸಿದರೂ ಸಹ ನಂತರದ ಹಂತಗಳಲ್ಲಿ ವಿಳಂಭವಾಗುತ್ತಿರುದನ್ನು ತಪ್ಪಿಸಲು ಎಲ್ಲಾ ಪ್ರಕ್ರಿಯೆಗಳು ಮುಗಿದ ನಂತರ 20 ದಿವಸ ಅಥವಾ ಒಂದು ತಿಂಗಳ ಒಳಗಾಗಿ ರೈತರಿಗೆ ಪೌತಿ ಖಾತೆ ನೀಡುವಂತೆ ಹಾಗೂ ಒಂದು ತಿಂಗಳೊಳಗಾಗಿ ಪೌತಿ ಖಾತೆ ಮಾಡದ ಅಧಿಕಾರಿ/ನೌಕರರನ್ನು ಅಮಾನತ್ತು ಅಥವಾ ವಜಾಗೊಳಿಸುವ ಬಗ್ಗೆ ಸರ್ಕಾರ ಕಟ್ಟು ನಿಟ್ಟಿನ ಆದೇಶ ಹೊರಡಿಸಲು ಕ್ರಮ ವಹಿಸುವುದೇ? (ವಿವರ ನೀಡುವುದು) | ವಿಳಂಬದ ಪ್ರಶ್ನೆ ಉದ್ಭವಿಸುವುದಿಲ್ಲ.<br><br>ಅವಿವಾದ ಪ್ರಕರಣಗಳು ತಂತ್ರಾಂಶದಲ್ಲಿ ನಿಗಧಿತ ಅವಧಿಯೊಳಗೆ ಕ್ರಮ ವಹಿಸಲಾಗಿರುತ್ತದೆ. ವಿವಾದಿತ ಪ್ರಕರಣಗಳಲ್ಲಿ ತಕರಾರು ಬಂದ್ದಲ್ಲಿ ತಹಶೀಲ್ದಾರ್ ಹಂತದಲ್ಲಿ ಕ್ರಮ ವಹಿಸಲಾಗುತ್ತದೆ. |

ಕಂಇ 371 ಎಂಆರ್‌ಆರ್ 2022

(ಆರ್. ಅಶೋಕ)
ಕಂದಾಯ ಸಚಿವರು

| ಪೌತಿ ಖಾತೆ ಆಂದೋಲನ ಪ್ರಗತಿ ವಿವರ | | | | |
|---|---|---|---|---|
| (01.01.2021 ರಿಂದ 09.12.2022) | | | | |
| ಕ್ರ.ಸಂ | ಜಿಲೆ | ಸ್ವೀಕೃತಿಯಾದ ಅರ್ಜಿಗಳು | ವಿಲೆಗೊಂಡ ಅರ್ಜಿಗಳು | ಬಾಕಿ |
| 1 | ಉಡುಪಿ | 525 | 427 | 98 |
| 2 | ಉತ್ತರ ಕನ್ನಡ | 1784 | 1696 | 88 |
| 3 | ಕೊಡಗು | 2337 | 1883 | 454 |
| 4 | ಕೊಪ್ಪಳ | 6602 | 6120 | 482 |
| 5 | ಕೋಲಾರ | 3438 | 2560 | 878 |
| 6 | ಗದಗ | 2045 | 1418 | 627 |
| 7 | ಗುಲ್ಬರ್ಗ | 2129 | 2035 | 94 |
| 8 | ಚಾಮರಾಜನಗರ | 3516 | 3205 | 311 |
| 9 | ಚಿಕ್ಕಬಳ್ಳಾಪುರ | 14737 | 12728 | 2009 |
| 10 | ಚಿಕ್ಕಮಗಳೂರು | 1252 | 1221 | 31 |
| 11 | ಚಿತ್ರದುರ್ಗ | 2280 | 2213 | 67 |
| 12 | ತುಮಕೂರು | 28193 | 25709 | 2484 |
| 13 | ದಕ್ಷಿಣ ಕನ್ನಡ | 6984 | 6205 | 779 |
| 14 | ದಾವಣಗೆರೆ | 2294 | 2144 | 150 |
| 15 | ಧಾರವಾಡ | 7530 | 7023 | 507 |
| 16 | ಬಳ್ಳಾರಿ | 2642 | 2533 | 109 |
| 17 | ಬಾಗಲಕೋಟೆ | 3437 | 3211 | 226 |
| 18 | ಬಿಜಾಪುರ | 1759 | 1712 | 47 |
| 19 | ಬೀದರ್ | 3113 | 2902 | 211 |
| 20 | ಬೆಂಗಳೂರು ಗ್ರಾಮಾಂತರ | 1139 | 1072 | 67 |
| 21 | ಬೆಂಗಳೂರು ನಗರ | 396 | 394 | 2 |
| 22 | ಬೆಳಗಾವಿ | 5944 | 5297 | 647 |
| 23 | ಮಂಡ್ಯ | 25957 | 23353 | 2604 |
| 24 | ಮೈಸೂರು | 4832 | 4270 | 562 |
| 25 | ಯಾದಗಿರಿ | 117 | 116 | 1 |
| 26 | ರಾಮನಗರ | 127 | 114 | 13 |
| 27 | ರಾಯಚೂರು | 2978 | 2685 | 293 |
| 28 | ವಿಜಯನಗರ | 1360 | 1326 | 34 |
| 29 | ಶಿವಮೊಗ್ಗ | 8643 | 8134 | 509 |
| 30 | ಹಾವೇರಿ | 6877 | 6301 | 576 |
| 31 | ಹಾಸನ | 545 | 514 | 31 |
| | **Grand Total** | **155512** | **140521** | **14991** |